ಮುಳವಾಡ ಏತ ನೀರಾವರಿ ಯೋಜನೆ

8(116); ಶ್ರೀ ಶಿವಾನಂದ ಎಸ್. ಪಾಟೀಲ (ಬಸವನಬಾಗೇವಾಡಿ)

ಅ) ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಮುಳವಾಡ ಏತ ನೀರಾವರಿ ಯೋಜನೆಗೆ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು;

ಆ) ಭೂಸ್ವಾಧೀನಕ್ಕೆ ಎಷ್ಟು ಎಕರೆ ಜಮೀನನ್ನು ಕೈಬಿಡಲಾಗಿತ್ತು. (ಜಮೀನಿನ ವಿವರಗಳನ್ನು ನೀಡುವುದು) ಕೈಬಿಡಲಾಗಿರುವ ಭೂಮಿಯ ಪಹಣಿಯಲ್ಲಿ ಈಗಲೂ ಸಹ ಕೆ.ಐ.ಎ.ಡಿ.ಬಿ. ಎಂದು ನಮೂದಾಗಿರುವುದು ನಿಜವೇ:

ಇ) ಹಾಗಿದ್ದಲ್ಲಿ, ಈ ಪಹಣಿಯಲ್ಲಿರುವ ದಾಖಲಾತಿಗಳಿಂದ ಕೆ.ಐ.ಎ.ಡಿ.ಬಿ. ಇಲಾಖೆಯ ಹೆಸರನ್ನು ಕೈಬಿಟ್ಟು ಮೂಲ ಭೂಮಾಲೀಕರ ಹೆಸರುಗಳನ್ನು ಮರುದಾಖಲಿಸುವಂತೆ ಸಂಬಂಧಪಟ್ಟವರಿಗೆ ಆದೇಶ ನೀಡಲಾಗುವುದೇ?

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

ಅ) ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಮುಳವಾಡ ಏತ ನೀರಾವರಿ ಯೋಜನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಆದರೆ ಕೈಗಾರಿಕಾ ಪ್ರದೇಶ ಸ್ಥಾಪಿಸಲು ಬಸವನಬಾಗೇವಾಡಿ ತಾಲ್ಲೂಕು, ಕೊಲ್ಹಾರ ಹೋಬಳಿ, ಮುಳವಾಡ ಗ್ರಾಮ ವ್ಯಾಪ್ತಿಯಲ್ಲಿ 4456–01 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ: 16.01.2010ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1), 1(3) & 28(1)ರಡಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಆ) ಪ್ರಾಥಮಿಕ ಅಧಿಸೂಚನೆಯ ಮೂಲಕ ಸ್ವಾಧೀನಕ್ಕೆ ಒಳಪಡಿಸಿದ್ದ ಜಮೀನುಗಳ ಪೈಕಿ ಯಾವುದೇ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಈವರೆವಿಗೂ ಕೈಬಿಟ್ಟಿರುವುದಿಲ್ಲ.

ಪ್ರಾಥಮಿಕ ಅಧಿಸೂಚನೆಗೆ ಒಳಪಟ್ಟ ಒಟ್ಟು 4456–01 ಎಕರೆ ಜಮೀನಿನ ಪೈಕಿ 3230–03 ಎಕರೆ ಜಮೀನಿಗೆ ದಿನಾಂಕ 4.10.2012ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಉಳಿಕೆ 1191–08 ಎಕರೆ ಜಮೀನನ್ನು ಅಂತಿಮ ಅಧಿಸೂಚನೆಗೆ ಒಳಪಡಿಸಿರುವುದಿಲ್ಲ. ಜಮೀನಿನ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

1191–08 ಎಕರೆ ಜಮೀನಿನ ಪಹಣಿಯ ಕಾಲಂ 9ರಲ್ಲಿ ಭೂಮಾಲೀಕರುಗಳ ಹೆಸರುಗಳು ನಮೂದಾಗಿದ್ದು ಕಾಲಂ 11ರಲ್ಲಿ ಮಾತ್ರ "ಕೆ.ಐ.ಎ.ಡಿ.ಬಿ.ಗೆ ಭೂಸ್ವಾಧೀನ" ಎಂಬುದಾಗಿ ನಮೂದಿಸಲಾಗಿದೆ.

ಇ) ಈ ಜಮೀನುಗಳ ಭೂಸ್ವಾಧೀನದ ವಿಷಯವನ್ನು ಮಂಡಳಿಯ ಸಭೆಯಲ್ಲಿ ಮಂಡಿಸಿ, ಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸುವ ಅಥವಾ ಕೈಬಿಡುವ ಬಗ್ಗೆ ಮೂರು ತಿಂಗಳುಗಳ ಒಳಗಾಗಿ ಸೂಕ್ತ ನಿರ್ಣಯವನ್ನು ಕೈಗೊಳ್ಳಲಾಗುವುದು.

ಅನುಬಂಧ-1

ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಮುಳವಾಡ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕಃ 16-1-2010 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಜಮೀನಿನ ಪೈಕಿ ದಿನಾಂಕಃ 4-1-2012 ರ ಅಂತಿಮ ಅಧಿಸೂಚನೆಯಲ್ಲಿ ಒಳಗೊಂಡಿರದ ಜಮೀನುಗಳ ವಿವರ.

ಕ್ರ.ಸಂ	ಸರ್ವೆ ನಂ	ವಿಸ್ತೀರ್ಣ
1	87	54-31
2	97	28-35
3	98	7-29
4	99	1-21
5	103	10-21
6	104/1	3-00
7	104/2	2-00
8	104/3	4-00
9	104/4	4-00
10	104/5	1-25
11	105	13-05
12	106/1	24-14
13	106/2	13-17
14	107/1	8-29

ಕ್ರ.ಸಂ	ಸರ್ವೆ ನಂ	ವಿಸ್ತೀರ್ಣ
29	114/2ಎ	7-09
30	114/2ಬಿ	12-00
31	114/2ಸಿ	12-00
32	115	15-38
33	116/1	2-39
34	116/2ಎ	2-20
35	116/3ಪಿ1	2-20
36	116/2ಬಿ	5-00
37	116/3ಪಿ2	5-18
38	116/4	2-20
39	117/1	5-02
40	117/2	10-00
41	118/1	13-02
42	118/2	11-00

15	107/2	18-02
16	107/3	4-00
17	107/4ဃ	8-20
18	107/4ဆ	4-00
19	108	24-16
20	109	14-37
21	110/1	10-18
22	110/2	10-18
23	110/3	9-06
24	111	1-12
25	112	17-33
26	113/1	11-22
27	113/2	12-00
28	114/1	5-00

43	121/ဃ	2-32
44	121/ဆ1	2-30
45	121/ဆ2	5-18
46	122	4-31
47	123	1-27
48	124	0-02
49	125/1	6-37
50	125/2	3-00
51	127	12-03
52	128/1	2-35
53	128/2	2-35
54	129/1	4-23
55	129/2/1	2-12
56	129/2/2	2-12

ಕ್ರ.ಸಂ	ಸರ್ವೆ ನಂ	ವಿಸ್ತೀರ್ಣ
57	129/3	2-29
58	130ಪೈ	29-32
59	131/1	7-00
60	131/2	5-37
61	131/3	7-21
62	131/4	0-29
63	132/1ಎ	6-27
64	132/2	5-00
65	133	13-17
66	134/1	9-03
67	134/2	4-00
68	135	6-16
69	136	6-20
70	137/1	2-31

ಕ್ರ.ಸಂ	ಸರ್ವೆ ನಂ	ವಿಸ್ತೀರ್ಣ
91	147/1	10-20
92	147/2	12-06
93	148	12-29
94	149/1	16-20
95	149/2	6-20
96	150/1	8-25
97	150/2	7-20
98	150/3	7-20
99	151/1	8-29
100	151/2	8-21
101	152/1ಅ	3-39
102	152/1ಬಿ	4-00
103	152/2	4-06
104	153/1	4-31

71	137/2	2-31
72	138/1ಎ	4-35
73	138/1ಬಿ	1-20
74	138/2	3-00
75	139/1	6-21
76	139/2	4-24
77	140/1	8-29
78	140/2ಬಿ	2-00
79	140/3	3-00
80	140/2ಎ	7-00
81	141/1	4-00
82	141/2	3-03
83	141/3	5-00
84	142/1ಎ	4-00
85	142/1ಬಿ	5-12
86	142/1ಸಿ	4-00
87	142/2	6-00
88	142/3	6-00
89	143	9-13
90	144	8-19
105	153	4-13
106	153/2ಎ	3-00
107	153/3	4-13
108	153/4	5-17
109	154	27-35
110	155	23-03
111	156	5-22
112	157/1ಎ	3-20
113	157/1ಬಿ	3-20
114	157/2ಎ	4-00
115	157/2ಬಿ	3-26
116	157/3	7-26
117	157/4	9-26
118	165	6-01
119	166/ಅ+ಐ/2	4-19
120	166/ಅ+ಐ/1	4-08
121	167	8-19
122	168/1ಅ	1-00
123	168/1ಐ	7-17
124	168/2	4-38

ಕ್ರ.ಸಂ	ಸರ್ವೆ ನಂ	ವಿಸ್ತೀರ್ಣ
125	168/3	2-38
126	168/4	8-31
127	169/1	5-30
128	169/2	3-00
129	169/3	2-00
130	170	11-04
131	171/1	4-03
132	171/2	3-06
133	171/3	2-36
134	171/4	2-29
135	172/1	2-02
136	172/2	2-02
137	172/3	2-02
138	172/4	4-04
139	172/5	2-02
140	172/6	2-02
141	172/7	9-09
142	173/1	3-35
143	173/2	3-35
144	173/3	3-35

ಕ್ರ.ಸಂ	ಸರ್ವೆ ನಂ	ವಿಸ್ತೀರ್ಣ
145	173/4	3-35
146	173/5	3-36
147	183/1	19-01
148	183/2ಅ	4-00
149	183/2ಬ	4-00
150	183/2ಕ	4-00
151	183/ಡ	4-00
152	183/3	5-00
153	183/4	11-00
154	213	10-17
155	215/1	4-12
156	215/2	4-12
157	215/3	4-12
158	216	17-09
159	217/1	5-15
160	217/2	5-15
161	217/3	5-16
162	217/4	5-16
163	223	7-32
164	226	5-01
	ಒಟ್ಟು	1191-08

ವಿಶೇಷ ಜಿಲ್ಲಾಧಿಕಾರಿ

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ. 4,456 ಎಕರೆ ಜಮೀನನ್ನು land bank ಮಾಡುತ್ತೇವೆಂದು ಭೂ ಸ್ವಾಧೀನ ಮಾಡಿಕೊಳ್ಳುವುದಕ್ಕೆ 2010ನೇ ಇಸವಿಯಲ್ಲಿ proposal ಇಟ್ಟಿದ್ದಾರೆ. ಆದರೆ ದುರ್ದೈವದಿಂದ ಇಲ್ಲಿಯವರೆಗೆ ಅದರ acquisition ಮಾಡಿಲ್ಲ, ಕೈಬಿಟ್ಟಿಲ್ಲ, ಕೆ.ಐ.ಎ.ಡಿ.ಬಿ.ಯಿಂದ notification ಮಾಡಿ ಹಾಗೆ ಬಿಟ್ಟಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ ನೀವು ಯಾವ ಉದ್ದೇಶಕ್ಕೆ ಭೂಸ್ವಾಧೀನ ಮಾಡಿಕೊಳ್ಳುತ್ತೀರಿ, ಅಲ್ಲಿ ಯಾವ ಕಾರ್ಖಾನೆ ಬರುತ್ತದೆ ಎಂದು ದಯಮಾಡಿ ಬಹಿರಂಗಪಡಿಸಬೇಕು. ಯಾವುದೇ ಕಾರ್ಖಾನೆ ಬರದಿದ್ದರೆ ಈ ಭೂಮಿಯನ್ನು ಏಕೆ ಸ್ವಾಧೀನ ಮಾಡಿಕೊಳ್ಳುತ್ತೀರೆಂದು ಬಹಿರಂಗಪಡಿಸಬೇಕು.

ಶ್ರೀ ಸಿದ್ದರಾಮಯ್ಯ:– ಇದು ದಿನಾಂಕ 16/01/2010ರಲ್ಲಿ preliminary notification ಆಗಿದೆ.

ಅಧ್ಯಕ್ಷರು:– Final notification ಆಗಿದೆಯಲ್ಲ.

ಶ್ರೀ ಸಿದ್ದರಾಮಯ್ಯ:– Final notificatiuon 2012 ರಲ್ಲಿ 3,230 ಎಕರೆ 03 ಗುಂಟೆಗೆ ಆಗಿದೆ. ಸುಮಾರು 1,191 ಎಕರೆ 08 ಗುಂಟೆ ಇದರಲ್ಲಿ ಬಿಡಬೇಕೆಂದು ಆಗಿದೆ. ಇವರ ಪ್ರಶ್ನೆ ಇರುವುದು ಏನೆಂದರೆ revenue record ನಲ್ಲಿ ಕೈ ಬಿಡಲಾಗಿರುವ ಭೂಮಿಯ ಪಹಣಿಯಲ್ಲಿ ಕೆ.ಐ.ಎ.ಡಿ.ಬಿ. ಹೆಸರು ಬರುತ್ತಿದೆ, ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು, ಕೆ.ಐ.ಎ.ಡಿ.ಬಿ. ಯಾವುದು ಕೈ ಬಿಟ್ಟಿದೆ, ಆ ಕೆ.ಐ.ಎ.ಡಿ.ಬಿ. ಇಲಾಖೆಯ ಹೆಸರನ್ನು ಬಿಡಿಸುವಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಮ್ಮ ವಿನಂತಿ ಏನೆಂದರೆ ಇದರಲ್ಲಿ ಕೆಲವು ಫಲವತ್ತಾದ ಭೂಮಿ ಇದೆ.

ಶ್ರೀ ಸಿದ್ದರಾಮಯ್ಯ:– ಅದರ ಬಗ್ಗೆ ಅರ್ಜಿ ಕೊಡಲಿ, ಮಾಡೋಣ.

ಶ್ರೀ ಶಿವಾನಂದ ಎಸ್. ಪಾಟೀಲ್:– ತಾವು meeting ಕರೆದರೆ ನಾವು ಸವಿಸ್ತಾರವಾಗಿ ಅದರ ಬಗ್ಗೆ ಕೂಲಂಕಷವಾಗಿ ತಿಳಿಸುತ್ತೇವೆ.

ಶ್ರೀ ಸಿದ್ದರಾಮಯ್ಯ:– ಆಯಿತು, ಒಂದು meeting ಕರೆಯುತ್ತೇನೆ.

ಅಧ್ಯಕ್ಷರು:– ಹಾಗೆ ಮಾಡಿ, ಒಂದು meeting ಕರೆದು ಚರ್ಚೆ ಮಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ಇನ್ನೊಂದು submission ಇದೆ. ಕೆ.ಐ.ಎ.ಡಿ.ಬಿ. ಯಲ್ಲಿ ಇಷ್ಟು ಎಕರೆ ಜಮೀನನ್ನು acquire ಮಾಡುತ್ತಾರೆ, ಆದರೆ ಒಂದು ಬಸ್‌ಸ್ಟಾಂಡ್‌ಗೆ ಎರಡು ಎಕರೆ ಭೂಮಿಯನ್ನು acquire ಮಾಡಿಕೊಡಿ ಎಂದು ಎರಡು ವರ್ಷದಿಂದ ಕೇಳುತ್ತಿದ್ದೇನೆ. ಅಲ್ಲಿ ಏನು ಹೇಳುತ್ತಾರೆಂದರೆ ಹೊಸ ಕಾನೂನು ಬಂದಿದೆ, land acquire ಆಗುತ್ತಿಲ್ಲವೆಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ:– ಒಂದು meeting ಕರೆಯುತ್ತೇನೆ. ಆಗ ಅದನ್ನೆಲ್ಲ ಚರ್ಚೆ ಮಾಡೋಣ ಬಿಡಿ.

ಅಧ್ಯಕ್ಷರು:– ಆಯಿತು, ಸಿ.ಟಿ. ರವಿಯವರೆ ಕೇಳಿ.

ಯು.ಜಿ.ಡಿ. ಯೋಜನೆ

17; ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿನ ಯು.ಜಿ.ಡಿ. ಯೋಜನೆಯನ್ನು ಅನುಷ್ಠಾನಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಯೋಜನೆಗೆ 2013–14ನೇ ಸಾಲಿಗೆ ನಿಗಧಿಪಡಿಸಿ ಬಿಡುಗಡೆ ಮಾಡಲಾದ ಅನುದಾನವೆಷ್ಟು:

ಇ) ಈ ಅನುದಾನದಲ್ಲಿ ಯಾವ್ಯಾವ ಕಾಮಗಾರಿಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ಕಾಮಗಾರಿವಾರು ಮಾಹಿತಿ ನೀಡುವುದು)?